# ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 1038/2020

ಸಾಕ್ಷಿದಾರರ ಹೆಸರು : ದ್ರಾಕ್ಷಾಯಿಣಿ ಪಿಡಬ್ಲ್ಯು:05
ತಂದೆ / ಗಂಡನ ಹೆಸರು : ಚಂದ್ರಪ್ಪ ಸಿಡಬ್ಲ್ಯು:04
ವಯಸ್ಸು : 54 ವರ್ಷ
ಉದ್ಯೋಗ : ಮನೆಕೆಲಸ
ವಾಸಸ್ಥಳ : ಬಿದರೆಕೆರೆ ಪ್ರ.ವ.ಬೋ ದಿ. :03.04.2025

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿ ಮತ್ತು ಗೈರು ಹಾಜರಿರುವ 2 ರಿಂದ 6ನೇ ಆರೋಪಿತರು ಗೊತ್ತು. (2 ರಿಂದ 6ನೇ ಆರೋಪಿತರ ಪರ ವಕೀಲರು ಗೈರು ಹಾಜರಾತಿ ವಿನಾಯತಿ ಅರ್ಜಿಯನ್ನು ಸಲ್ಲಿಸಿದ್ದರಿಂದ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿದ್ದರಿಂದ 2 ರಿಂದ 6ನೇ ಆರೋಪಿತರನ್ನು ಗುರುತಿಸಲಾಯಿತು ಎಂದು ತೆಗದುಕೊಳ್ಳಲಾಗಿರುತ್ತದೆ. )

ಚಾಸಾ.1 ರವರು ನನ್ನ ಅಳಿಯ. ಚಾಸಾ.2 ನನ್ನ ಮಗಳು. ಚಾಸಾ.3 ನನ್ನ ಸಂಬಂಧಿಕಳು. ಚಾಸಾ.5 ನನ್ನ ಅಳಿಯನ ತಮ್ಮ. ಚಾಸಾ.6 ಮತ್ತು 7 ರವರು ಗೊತ್ತು.

ದಿನಾಂಕಃ 05.08.2012 ರಂದು ರಾತ್ರಿ 08ಃ15 ಗಂಟೆ ಸಮಯದಲ್ಲಿ 1ನೇ ಆರೋಪಿ ಮತ್ತು ಚಾಸಾ.5 ರವರು ನಲ್ಲಿ ನೀರಿನ ವಿಚಾರವಾಗಿ ಗಲಾಟೆ ಮಾಡುತ್ತಿದ್ದು, ಚಾಸಾ.1 ರವರು ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ಕುಡಗೋಲಿನಿಂದ ಚಾಸಾ.1 ರವರ ತಲೆಗೆ ಹೊಡೆದಿದ್ದು, ಚಾಸಾ.3 ಮತ್ತು ನಾನು ಗಲಾಟೆ ಬಿಡಿಸಲು ಹೋದಾಗ ನಮಗೂ ಸಹ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಹಲ್ಲೆಪಡಿಸಿರುತ್ತಾರೆ. ನಂತರ ಊರಿನ ಗ್ರಾಮಸ್ಥರು ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ಚಾಸಾ.1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕುಡಗೋಲನ್ನು ನೋಡಿ ಗುರುತಿಸಿದ್ದು, ಸದರಿ ಕುಡಗೋಲನ್ನು 1ನೇ ಆರೋಪಿಯು ಹಲ್ಲೆ ಮಾಡಿರುತ್ತಾನೆಂದು ನುಡಿದಿದ್ದರ ಮೇರೆಗೆ ಸದರಿ ಕುಡಗೋಲನ್ನು ಎಂ.ಓ.1 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿ ತನಿಖಾಧಿಕಾರಿಯವರ ಮುಂದೆ ನೀಡಿರುವ ಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು )

**ಪಾಟೀಸವಾಲು : ಮಾನ್ಯ ಎಪಿಪಿಯವರಿಂದ**

ದಿನಾಂಕಃ 05.08.2012 ರಂದು ಆರೋಪಿತರಿಗೂ ಮತ್ತು ಚಾಸಾ.5 ರವರ ಮಧ್ಯೆ ಗಲಾಟೆಯಾಗಿದ್ದು, ಆರೋಪಿತರೆಲ್ಲರೂ ಹಳೇ ವೈಶಮ್ಯದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ.1 ರವರಿಗೆ ಸುಳೇ ಮಗನೇ, ಬೋಳಿ ಮಗನೇ ಎಂದು ಬೈದಾಡಿದ್ದು, 1ನೇಯ ಆರೋಪಿ ಚಾಸಾ.1 ರವರ ತಲೆಗೆ ಕುಡಗೋಲಿನಿಂದ ಹೊಡೆದು ರಕ್ತ ಗಾಯಪಡಿಸಿದ್ದನು ಎಂದರೆ ಸರಿ. ಅದನ್ನು ಕಂಡು ನಾನು ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ನನಗೂ ಸಹ ಹೊಡೆದಿರುತ್ತಾನೆಂದರೆ ಸರಿ. ಅದನ್ನು ಕಂಡು ಚಾಸಾ.2 ಮತ್ತು 3 ರವರು ಗಲಾಟೆ ಬಿಡಿಸಲು ಬಂದಾಗ ಅವರಿಗೂ ಸಹ ಕೈ ಕಾಲುಗಳಿಂದ ಮೈ ಕೈಗೆ ಹೊಡೆದಿರುತ್ತಾರೆಂದರೆ ಸರಿ. ಅದನ್ನು ಕಂಡು ಚಾಸಾ.3 ರವರ ಗಂಡ ಆರೋಪಿತರಿಗೆ ಛೀಮಾರಿ ಹಾಕಿ ಗಲಾಟೆ ಬಿಡಿಸಿರುತ್ತಾರೆಂದರೆ ಸರಿ. ಆರೋಪಿತರು ಹೋಗುವಾಗ ನೀವು ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದರೆ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೇದರಿಕೆ ಹಾಕಿದ್ದರು ಎಂದರೆ ಸರಿ. ಈ ಸಂಬಂಧ ಪೊಲೀಸರು ನನ್ನನ್ನು ವಿಚಾರಿಸಿದ್ದು, ನಾನು ದಿನಾಂಕಃ 06.08.2012 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

**ಪಾಟೀಸವಾಲು ಆರೋಪಿ ಪರ ಶ್ರೀ.ಆರ್.ಎಸ್.ಎ ವಕೀಲರಿಂದ**

ನನ್ನ ತವರು ಮನೆ ದೇವರ ಹೊಸಹಳ್ಳಿ ಗ್ರಾಮ. ನನ್ನ ಗಂಡನ ಮನೆ ತಾಳಿಕಟ್ಟೆ ಗ್ರಾಮದಲ್ಲಿದೆ. ನನ್ನ ಆಧಾರ ಕಾರ್ಡ್, ರೇಷನ ಕಾರ್ಡ ಗಳೆಲ್ಲವೂ ತಾಳಿಕಟ್ಟೆ ಗ್ರಾಮದ ವಿಳಾಸವನ್ನು ಹೊಂದಿವೆ. ನಮ್ಮ ವಾಸದ ಮನೆಯು ತಾಳಿಕಟ್ಟೆ ಗ್ರಾಮದಲ್ಲಿದೆ ಎಂದರೆ ಸರಿ. ಮರಳಪ್ಪ, ನಿಜಲಿಂಗಪ್ಪ, ಮೋಹನ ಕುಮಾರ ಮತ್ತು ಚಾಸಾ. 1 ರವರ ಕುಟುಂಬವೇ ಬೇರೆ ಬೇರೆ ಎಂದರೆ ಸರಿ. 1 ಮತ್ತು 3ನೇ ಆರೋಪಿತರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆಂದರೆ ಸರಿ. 2ನೇ ಆರೋಪಿತಳಿಗೆ ವಯಸ್ಸಾಗಿದೆ ಎಂದರೆ ಸರಿ. 2ನೇ ಆರೋಪಿತರು ಚಾಸಾ.1 ಮತ್ತು 5 ರವರ ವಿರುದ್ಧ ಪಾಲುವಿಭಾಗವನ್ನು ಕೋರಿ ಅಸಲು ದಾವಾ ನಂ.164/2011 ರಲ್ಲಿ ದಾವೆಯನ್ನು ದಾಖಲಿಸಿದ್ದಳು ಎಂದರೆ ಸರಿ.

1 ನೇ ಆರೋಪಿಯು ಚಾಸಾ.1 ರಿಂದ 3 ಮತ್ತು ಚಾಸಾ.5 ರವರ ವಿರುದ್ಧ ಸಿ.ಸಿ.ನಂ.1026/2020 ರಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿ. ನೀರಿನ ನಲ್ಲಿ ಪೈಪ್ ಲೈನ್ ಹಾಕಿಸುವ ಕಾಲಕ್ಕೆ ಗ್ರಾಮ ಪಂಚಾಯತಿಯವರು ಯಾರು ಸಹ ಬಂದಿರಲಿಲ್ಲ. ಚಾಸಾ.5 ರವರು ನಲ್ಲಿ ನೀರಿಗಾರಿ ಪರವಾನಿಗೆ ಪಡೆದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಗಲಾಟೆಯ ಕಾಲಕ್ಕೆ ಸುಮಾರು 100 ರಿಂದ 150 ಜನ ಗ್ರಾಮಸ್ಥರು ಸೇರಿದ್ದು, ಯಾರು ಸಹ ಬಿಡಿಸಲು ಬಂದಿರುವುದಿಲ್ಲ. ಅವರ ಹೆಸರು, ವಿಳಾಸ ಹೇಳಲು ಆಗುವುದಿಲ್ಲ. ಗಲಾಟೆಯಾದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ.

ಚಾಸಾ.1 ರವರಿಗೆ ಹಲ್ಲೆ ಮಾಡಿದಾಗ ಅವರು ಅಂಗಿಯನ್ನು ತೊಟ್ಟಿದ್ದು, ಅವರ ಬಟ್ಟೆಗಳು ಮತ್ತು ನನ್ನ ಸೀರೆ ಸಹ ರಕ್ತಸಿಕ್ತವಾಗಿದ್ದವು. ಗಲಾಟೆ ಕಾಲಕ್ಕೆ ಯಾರು ಯಾರು ಯಾರ ಯಾರಿಗೆ ನಿರ್ದಿಷ್ಟವಾಗಿ ಯಾವ ಶಬ್ದಗಳಿಂದ ಬೈದಿರುತ್ತಾರೆಂದು ಹೇಳಲು ಆಗುವುದಿಲ್ಲ. ನಾವು ಯಾವುದೇ ಕೆಲಸ ಕಾರ್ಯಗಳಿಗೆ ಹೊಸದುರ್ಗಕ್ಕೆ ಹೋಗುತ್ತೇವೆ ಎಂದರೆ ಸರಿ. ಹೊಸದುರ್ಗ ನಮ್ಮ ಮನೆಯಿಂದ ಸುಮಾರು ಒಂದುವರೆ ಕಿ.ಮೀ ಅಂತರ ಆಗುತ್ತದೆ ಎಂದರೆ ಸರಿ. ಹೊಳಲ್ಕೆರೆ ನಮ್ಮ ಮನೆಯಿಂದ ಸುಮಾರು 25 ಕಿ.ಮೀ ಅಂತರದಲ್ಲಿದೆ ಎಂದರೆ ಸರಿ. ನಾವು ಚಾಸಾ.1 ರವರನ್ನು ಹೊಸದುರ್ಗದಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ ತಂದು ದಾಖಲಿಸಿರುತ್ತೇವೆ. ಚಾಸಾ.1 ರವರನ್ನು ಅಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆತಂದಿರುತ್ತೇವೆ.

ಆರೋಪಿ ಮತ್ತು ಚಾಸಾ.1 ರವರ ಮಧ್ಯೆ ಯಾವುದೇ ಗಲಾಟೆಯಾಗಿಲ್ಲ, ಆರೋಪಿತರು ಅವಾಚ್ಯ ಶಬ್ಧಗಳಿಂದ ಬೈದಾಡಿಲ್ಲ, ಕೈ ಕಾಲುಗಳಿಂದ ಹಲ್ಲೆ ಪಡಿಸಿಲ್ಲ ಮತ್ತು ಯಾವುದೇ ಪ್ರಾಣಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿತಳು 1 ನೇ ಆರೋಪಿತನೊಂದಿಗೆ ಅನೋನ್ಯವಾಗಿದ್ದಾಳೆ ಎಂದರೆ ಸರಿ. 2 ನೇ ಆರೋಪಿತಳು ಪಾಲು ವಿಭಾಗಕ್ಕಾಗಿ ಸಲ್ಲಿಸಿದ ದಾವೆಯನ್ನು ಹಿಂಪಡೆಯಬೇಕೆಂಬ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಎಂ.ಓ.1 ರಂತಹ ವಸ್ತುಗಳು ಎಲ್ಲಾ ರೈತರ ಮನೆಯಲ್ಲಿ ದೊರೆಯುತ್ತವೆ ಎಂದರೆ ಸರಿ. ಎಂ.ಓ.1 ನ್ನು ಈ ಕೇಸಿಗಾಗಿ ಸೃಷ್ಟಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಯಾವತ್ತು ಸಹ ಬಿದರಿಕೆರೆಯಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ಚಾಸಾ.2 ರವರು ನನ್ನ ಮಗಳಾಗಿದ್ದರಿಂದ ಅವರಿಗೆ ಸಹಾಯ ಮಾಡುವ ದುರುದ್ದೇಶದಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ತಿಳಿಸಿದ ಸಂಗತಿಗಳೆಲ್ಲ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ